ಅಸಲು ದಾವೆ ನಂಃ 100/2021     ಡಿ . ಡಬ್ಲ್ಯೂಃ 1- ಯಲ್ಲಪ್ಪ ತಂದೆ ಗೋವಿಂದಪ್ಪ ಜಾಮನಕಟ್ಟಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 24 /02/2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ   ವಾದಿ ಪರ ವಕೀಲರಾದ ಶ್ರೀ.ಪಿ.ಕೆ.ಯು. ರವರಿಂದಃ**

ನನ್ನ ತಂದೆ ಗೋವಿಂದಪ್ಪರವರು 2001 ರಲ್ಲಿ ನಿಧನರಾಗಿರುತ್ತಾರೆ. ನಾನು ಒಂಭತ್ತನೇಯ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ . ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿ ನನಗೆ ತಿಳಿದಿರುತ್ತದೆ. ನನಗೆ ವಾದಿಯವರ ಪರಿಚಯ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯಕ್ಕೆ ಬಂದ ನಂತರ ವಾದಿಯವರು ಗೊತ್ತಾಗಿರುತ್ತಾರೆ ಎಂದು ನುಡಿದಿರುತ್ತಾರೆ.ವಾದಿಯವರು ಯಾವ ಪರಿಹಾರ ಕೇಳಿ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ಇಮಾಮಸಾಬರವರ ಪರಿಚಯ ನನಗೆ ಇರಲಿಲ್ಲ, ನನ್ನ ತಂದೆಯವರಿಗೆ ಇತ್ತು. ಇಮಾಮಸಾಬ ಯಾವ ಊರಿನಲ್ಲಿ ಇರುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಇಮಾಮಸಾಬರವರು ಅಮೀನಾಬಿ ಮತ್ತು ಪೀರಸಾಬರವರ ತಂದೆಯವರು ಎಂದರೆ ಸರಿ . ಇಮಾಮಸಾಬರವರಿಗೆ ಹುಸೇನಬಿ ಎನ್ನುವ ಹೆಂಡತಿ ಇದ್ದರೂ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಮೂಲತಃ ಇಮಾಮಸಾಬರವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರಿಗೆ ಗೊತ್ತು ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯು ಮೂಲತಃ ಯಾರಿಗೆ ಸೇರಿದ್ದು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಬರೆಸಿರುತ್ತೇನೆ. ದಿಃ 02.05.1970 ರಂದು ಇಮಾಮಸಾಬರವರು ನಿಧನರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇಮಾಮಸಾಬರವರ ಜೀವಿತಾ ಕಾಲದಲ್ಲಿ ದಾವಾ ಆಸ್ತಿಯ ಮಾಲೀಕರಾಗಿದ್ದುಕೊಂಡು ಸ್ವಾಧೀನದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಇಮಾಮಸಾಬರವರು ನಿಧನರಾದ ನಂತರ ವಾದಿಯವರು ದಾವಾ ಆಸ್ತಿಯ ಮಾಲೀಕರಾಗಿದ್ದುಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗಾಗಲೀ, ನನ್ನ ತಂದೆಯವರಿಗಾಗಲೀ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಇಮಾಮಸಾಬರವರು ನಿಧನರಾದ ನಂತರ ವಾದಿಯವರು ಮಾಲೀಕರಾಗಿದ್ದರೂ ಸಹ ನನ್ನ ತಂದೆಯವರು ಕೆಲವು ಜನರ ಜೊತೆಗೆ ಸೇರಿಕೊಂಡು ನಕಲಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ನಕಲಿ ದಾಖಲಾತಿಗಳ ಆಧಾರದ ಮೇಲೆ ನನ್ನ ತಂದೆಯವರು ಅವರ ಹೆಸರನ್ನು ದಾಖಲು

ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಪತ್ರವು 1973 ರಲ್ಲಿ ಆಗಿರುತ್ತದೆ. ಸದರಿ ಖರೀದಿ ಪತ್ರದ ದಿನಾಂಕ ನನಗೆ ನೆನಪಿಲ್ಲ. ನಾನು ದಿಃ 01.07.1974 ರಂದು ಜನಿಸಿರುತ್ತೇನೆ. ನಾನು 1973 ರಲ್ಲಿ ಜನಿಸದೇ ಇರುವುದರಿಂದ ಖರೀದಿ ಪತ್ರದ ಬಗ್ಗೆಯಾಗಲೀ ಅಥವಾ ಆ ಸಂದರ್ಭದಲ್ಲಿ ನಡೆದ ವ್ಯವಹಾರಗಳ ಬಗ್ಗೆಯಾಗಲೀ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸದರಿ ಮೂಲ ಖರೀದಿ ಪತ್ರವು 2016 ರಲ್ಲಿ ಹಳ್ಳ ಬಂದಿದ್ದರಿಂದ ಕಳೆದು ಹೋಗಿರುತ್ತದೆ. ಸದರಿ ಮೂಲ ಖರೀದಿ ಪತ್ರವು ಕಳೆದು ಹೋಗಿರುವ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಾಗಲೀ ಅಥವಾ ಸಾಕ್ಷ್ಯ ಪ್ರಮಾಣ ಪತ್ರದಲ್ಲಾಗಲೀ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಹಾಗೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1973 ರಲ್ಲಿ ಆದಂತಹ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಖರೀದಿ ಪತ್ರವನ್ನು ವಾದಿಯವರ ತಂದೆಯವರು ನಮ್ಮ ತಂದೆಗೆ ಬರೆದುಕೊಟ್ಟಿರುತ್ತಾರೆ. ವಾದಿಯವರ ತಂದೆಯವರ ಹೆಸರು ನನಗೆ ನೆನಪಿಲ್ಲ.ವಾದಿಯವರ ತಂದೆಯವರು ಖರೀದಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಮಾಮಸಾಬರವರು ನನ್ನ ತಂದೆಯವರಿಗೆ ಯಾವುದೇ ಖರೀದಿ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಮತ್ತು ಸದರಿ ಖರೀದಿ ಪತ್ರದಲ್ಲಿರುವ ಸಹಿಯು ಸಹ ಇಮಾಮಸಾಬರವರದ್ದು ಅಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಕಬಳಿಸಬೇಕು ಎನ್ನುವ ಉದ್ದೇಶದಿಂದ ನನ್ನ ತಂದೆಯವರು, ತದನಂತರ ನಾನು ವಾದಿಯವರ ಸ್ವಾಧೀನಕ್ಕೆ ಅಡ್ಡಿಪಡಿಸುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ನಿಡಿ–2 ನ್ನು ನಾನೇ ಅರ್ಜಿ ಕೊಟ್ಟು ಪಡೆದುಕೊಂಡಿರುತ್ತೇನೆ. ಸದರಿ ನಿಡಿ–2 ಅನ್ನು ನ್ಯಾಯಾಲಯದಲ್ಲಿ ದಾವೆ ದಾಖಲಾದ ನಂತರ ತೆಗೆಸಿಕೊಂಡಿರುತ್ತೇನೆ. ಸದರಿ ನಿಡಿ–2 ನ್ನು ಪಡೆದುಕೊಂಡಿರುವ ದಿನಾಂಕ ನನಗೆ ನೆನಪಿಲ್ಲ. ನಿಡಿ–2 ಕ್ಕೆ ಸಾಕ್ಷಿದಾರರು ಎಂದು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರಿಂದಲೂ ಸಹ ಖರೀದಿ ವ್ಯವಹಾರ ನಡೆದಾಗ ಸಾಕ್ಷಿದಾರರು ಯಾರು ಇದ್ದರು ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಸದರಿ ಖರೀದಿ ವ್ಯವಹಾರ ಆಗಿದೆ ಎಂದು ಸಿದ್ದಪಡಿಸುವ ಬಗ್ಗೆ ಯಾರನ್ನಾದರೂ ಸಾಕ್ಷಿ ಮಾಡಿಸುತ್ತೀರಾ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ಮಾಡಿಸುವುದಿಲ್ಲ ಎಂದು ನುಡಿದಿರುತ್ತಾರೆ. ಮೂಲ ಖರೀದಿ ಪತ್ರದಲ್ಲಿ ಇಮಾವಸಾಬರವರ ಸಹಿ ಆಗಿರುವುದಿಲ್ಲ ಎಂದು ಕಂಡು ಬರುತ್ತದೆ ಎನ್ನುವ ಉದ್ದೇಶದಿಂದ ಮೂಲ ಖರೀದಿ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಇಮಾಮಸಾಬರವರು ಖರೀದಿ ಪತ್ರವನ್ನು ಬರೆದುಕೊಡದೇ ಇರುವುದರಿಂದ ನನ್ನ ತಂದೆಯವರಿಗಾಗಲೀ, ನನಗಾಗಲೀ ದಾವಾ ಆಸ್ತಿಯ ಮೇಲೆ

ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು  ಮತ್ತು ನನ್ನ ತಂದೆಯವರು ಯಾವ ಕಾಲಕ್ಕೂ  ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮುಂದುವರೆದ ಪಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.